ತುಮಕೂರು ಜಿಲ್ಲೆ ಸಿದ್ಧಗಂಗಾ ಮಠದ ಬಗ್ಗೆ

೧೭೦೮. ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಿದ್ಧಗಂಗಾಮಠದಲ್ಲಿ ತಾ॥ ೩೧-೩-೮೮ ರಂದು ನಡೆದ ಮಂಗಳ ಮಹೋತ್ಸವಕ್ಕೆ ಉಸ್ತುವಾರಿಗಾಗಿ ನೇಮಿಸಲಾಗಿದ್ದ ಪೋಲೀಸರೆಷ್ಟು, ಇದಕ್ಕೆ ಆದ ಹಣವೆಷ್ಟು ?

ಆ) ಕಾತ್ಸಂದ್ರದಿಂದ ದೇವರಾಯನದುರ್ಗಕ್ಕೆ ಮಠದ ಮುಖಾಂತರ ಹಾದುಹೋಗುವ (೩ ಕಡೆಯಿಂದ ಸಾರ್ವಜನಿಕರು) ರಸ್ತೆಗೆ ಸಾರ್ವಜನಿಕರು ಪ್ರವೇಶಿಸದಂತೆ ತಡೆದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ. ರಸ್ತೆಯನ್ನು ಅಡ್ಡಗಟ್ಟಲು ಸರ್ಕಾರದಿಂದ ಅನುಮತಿಯನ್ನು ಪಡೆಯಲಾಗಿತ್ತೆ. ಹಾಗಿದ್ದಲ್ಲಿ ಇದು ಅಪರಾಧವಲ್ಲವೇ ? ಇದಕ್ಕೆ ಕಾರಣಕರ್ತರಾದವರ ಮೇಲೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಇ) ಸದರಿ ರಸ್ತೆಯ ಉದ್ಭವ ಗಂಗೆಗೆ ಹೋಗಂತ್ತಿರುವ ಭಕ್ತರನ್ನು ಬಿಡದೆ ತೊಂದರೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ತಪಿತಸ್ಥ ಅಧಿಕಾರಿಗಳ ಮೇಲೆ ಸರ್ಕಾರದವರಂ ಕೈಗೊಂಡ ಕ್ರಮಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು). —

ಅ) ಪೋಲೀಸರು ೭೨

ವೆಚ್ಚ ರೂ. ೨,೧೬೦-೦೦

ಆ) ಸರ್ಕಾರದ ಗಮನಕ್ಕೆ ಬಂದಿಲ್ಲ.

ಇ) ಮೇಲ್ಕಂಡತ್ತಿದೆ.

ಅಬಕಾರಿ ಇಲಾಖೆಗೆ ಸೇರಿದ ಭೂಮಿ

೧೬೩೧. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ರಾಜ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಅಬಕಾರಿ ಇಲಾಖೆಗೆ ಸೇರಿದ ಭೂಮಿ ಎಷ್ಟು ?

ಆ) ಸದರಿ ಭೂಮಿಯಲ್ಲಿ ಬಹಳಷ್ಟು ಭೂಮಿಯನ್ನು ಬಡ ರೈತರು ಹಂಗಾಮಿಯಾಗಿ ಸಾಗುವಳಿ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಇ) ಬಡವರಿಂದ ಹಂಗಾಮಿ ಸಾಗುವಳಿಯಾಗುತ್ತಿರುವ ಈ ಭೂಮಿಯನ್ನು ಇಲಾಖೆಯಿಂದ ಬಿಡಿಂಗಡೆ ಮಾಡಿ ಸಾಗುವಳಿಗೆ ಬಿಡುವ ಉದ್ದೇಶವೇನಾದರೂ ಸರ್ಕಾರಕ್ಕೆ ಇದೆಯೆ?

ಶ್ರೀ ಡಿ. ಬಿ. ಇನಾಂದಾರ್ (ರಾಜ್ಯ ಅಬಕಾರಿ ಸಚಿವರು).—

ಅ) ಈಗಿರುವ ಮಾಹಿತಿಯ ಪ್ರಕಾರ ರಾಜ್ಯದಲ್ಲಿ ಒಟ್ಟು ೨,೮೯,೩೯೫ ಎಕರೆ ಮತ್ತು ೧೫ ಗುಂಟೆ ಅಬಕಾರಿ ಇಲಾಖೆಗೆ ಸೇರಿದ ಸೇಂದಿ ವನದ ಭೂಮಿ ಇರುವುದು.

ಆ) ಬಂದಿದೆ.

ಇ) ದಿನಾಂಕ ೧-೭-೧೯೮೪ ಕ್ಕಿಂತ ಹಿಂದಿನ ಅವಧಿಯಲ್ಲಿ ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಮತ್ತು ಅರ್ಹವಾಗಿರುವ ಪ್ರಕರಣಗಳನ್ನು ಸಕ್ರಮಗೊಳಿಸಲು ಒಂದು ಕರಡು ಮಸೂದೆಯು ವಿಧಾನ ಸಭೆಯ ಮುಂದೆ ಇದೆ.